ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

(ಅ) ಕಳೆದ 3 ವರ್ಷಗಳಿಂದ ರಾಜ್ಯದಲ್ಲಿರುವ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಸಂಖ್ಯೆ ಕೆಳಕಂಡಂತಿದೆ :

ವರ್ಷ	ಪ್ರಾಥಮಿಕ		ಮಾಧ್ಯಮಿಕ			ಪ್ರೌಢಶಾಲೆ
	ಪ.ವರ್ಗ	ಪ.ಜಾತಿ	ಪ.ಜಾತಿ	ಪ.ವರ್ಗ	ಪ.ಜಾ	ಪ.ವರ್ಗ
96-97	1023354	358870	415444	143219	179455	57976
97-98	1028551	361653	415915	144023	180792	59070
98-99	1222183	422148	421293	139117	223160	73972

(ಆ) ವಿದ್ಯಾರ್ಥಿವೇತನ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಸಂಖ್ಯೆ ಕೆಳಕಂಡಂತಿದೆ:

ವರ್ಷ	ಪ್ರಾಥಮಿಕ		ಮಾಧ್ಯಮಿಕ ಪ್ರೌಢಶಾಲೆ	
	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
96-97	781373	246706	392329	130200
97-98	760173	221613	701482	185694
98-99	723160	253760	869258	202011

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿರುವ ಖಾಲಿ ಹುದ್ದೆಗಳು

1112 (1627)

ಶ್ರೀ ರಾಮಲಿಂಗರೆಡ್ಡಿ (ಜಯನಗರ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿರುವ ನೌಕರರ ಸಂಖ್ಯೆ ಎಷ್ಟು?

ಆ) ಮೇಲ್ಕಂಡ ಮಂಡಳಿಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಸಂಖ್ಯೆ ಎಷ್ಟು? (ಹುದ್ದೆವಾರು ವಿವರ ಒದಗಿಸುವುದು)

ಇ) ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಸಣ್ಣ ಕೈಗಾರಿಕಾ ಸಚಿವರು) :

ಅ) 293 ನೌಕರರು

ಆ) ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ 285, ವಿವರಗಳು ಈ ಕೆಳಕಂಡಂತೆ ಇರುತ್ತದೆ

1) ಆರ್ಥಿಕ ಸಲಹೆಗಾರರು ಮತ್ತು ಮುಖ್ಯಲೆಕ್ಕಪತ್ರಾಧಿಕಾರಿಗಳು	-	01
2) ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಆಡಳಿತ)	-	01
3) ಪ್ರಕಟಣಾಧಿಕಾರಿ	-	01
4) ಅಂಕಿ ಅಂಶ ಅಧಿಕಾರಿ	-	01
5) ವಿಚಾರಣಾಧಿಕಾರಿ	-	01
6) ವಿಶೇಷ ತಹಶೀಲ್ದಾರ್(ವಸೂಲಾತಿ)	-	02
7) ಅಭಿವೃದ್ಧಿ ಅಧಿಕಾರಿಗಳು	-	05

8) ಕಛೇರಿ ವ್ಯವಸ್ಥಾಪಕರು : ತಾಂತ್ರಿಕ ಅಧೀಕ್ಷಕರು	-	02
9) ಜಿಲ್ಲಾಖಾದಿ ಗ್ರಾ ಅಧಿಕಾರಿ : ಅಧೀಕ್ಷಕರು	-	03
10) ಪ್ರಥಮ ದರ್ಜೆ ಸಹಾಯಕರು		
ಆಡಿಟರ್ ಕಮ್ ಇನ್ಸ್‌ಪೆಕ್ಟರ್ :	-	39
11) ತಾಂತ್ರಿಕ ಮೇಲ್ವಿಚಾರಕರು	-	48
12) ಶೀಘ್ರಲಿಪಿಗಾರರು	-	05
13) ಸಹಾಯಕ ಭಾಷಾಂತರಕಾರರು	-	01
14) ತಾಂತ್ರಿಕ ಸಹಾಯಕರು	-	79
15) ಬೆರಳಚ್ಚುಗಾರರು	-	10
16) ದ್ವಿತೀಯ ದರ್ಜೆ ಸಹಾಯಕರು	-	21
17) ಗುಮಾಸ್ತ ಸಹ ಬೆರಳಚ್ಚುಗಾರರು	-	14
18) ವಾಹನ ಚಾಲಕರು	-	11
19) ಟೆಂಡರ್	-	13
20) ದಲಾಯತ್ : ಸ್ವಾಗತಕಾರರು ಕಾವಲುಗಾರರು :	-	27
	ಒಟ್ಟು	285

ಇ) ಮೇಲೆ ಖಾಲಿ ಇರುವ 285 ಹುದ್ದೆಗಳಲ್ಲಿ 50 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ದಿನಾಂಕ: 6-12-97 ರಂದು ಅನುಮತಿ ಸೂಚಿಸಿರುತ್ತದೆ

ಮೈಸೂರು ನಗರದಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ ಕೈಗೊಂಡಿರುವ ಕಾಮಗಾರಿಗಳು

1113 (1503)

ಶ್ರೀ ಹೆಚ್ ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ನಗರಾಭಿವೃದ್ಧಿ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಮೈಸೂರು ನಗರದಲ್ಲಿ ಏಷ್ಯಾಅಭಿವೃದ್ಧಿ ಬ್ಯಾಂಕಿನ ನೆರವಿನಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳ ಬಗ್ಗೆ ಇತ್ತೀಚಿನ ಪ್ರಗತಿ ಏನು? (ವಿವರಗಳನ್ನು ಒದಗಿಸುವುದು)

ಆ) ಸದರಿ ಕಾಮಗಾರಿಗಳ ಪೈಕಿ ಯಾವ ಯಾವ ಕಾಮಗಾರಿಗಳನ್ನು ಯಾವ ಯಾವ ಸಮಯದಲ್ಲಿ ಪೂರ್ಣಗೊಳಿಸಲಾಗುವುದು.

ಇ) ಸದರಿ ಕಾಮಗಾರಿಗಳನ್ನು ಇಂತಿಷ್ಟೆ ಸಮಯದಲ್ಲಿ ಪೂರ್ಣಗೊಳಿಸಬೇಕೆಂದು ಕಾಲ ನೀಡಿ ಒಪ್ಪಂದ ಮಾಡಿಕೊಳ್ಳಲಾಗಿದೆಯೇ?

ಶ್ರೀ ಎಂ.ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು)

ಅ) ಮೈಸೂರು ನಗರದಲ್ಲಿ ಏಷ್ಯಾ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ ನಗರಾಭಿವೃದ್ಧಿ ಪ್ರಾಧಿಕಾರವು ಈ ಕೆಳಕಂಡ ಮೂರು ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದೆ. ಅದರ ವಿವರಗಳು ಈ ಕೆಳಗಿನಂತಿವೆ.

1) ಹೊರ ವರ್ತುಲ ರಸ್ತೆ